


## ಶುದ್ಧ ನೀರಿಗೆ ಪ್ಯೂರಿಟ್ ಅಲ್ಟಿಮಾ

ಸ್ವಚ್ಛ ಕುಡಿಯುವ ನೀರು ಪೂರೈಸುವ ಜಲಶುದ್ಧೀಕರಣ ಸಾಧನಗಳ ಪೈಕಿ ಖ್ಯಾತಿ ಗಳಿಸಿದ ಪ್ಯೂರ್‌ಇಟ್ ಈಗ ಇನ್ನಷ್ಟು ಸುಧಾರಿಸಿದೆ. ಹಿಂದೂಸ್ತಾನ್ ಯೂನಿಲಿವರ್ ಲಿಮಿಟೆಡ್ ಸಂಸ್ಥೆ ಪ್ಯೂರ್‌ಇಟ್, ಅಲ್ಟಿಮಾ ಎಂಬ ವಾಟರ್ ಪ್ಯೂರಿಫೈರ್ ಅನ್ನು ಮಾರುಕಟ್ಟೆಗೆ ತಂದಿದೆ.

ಆಕರ್ಷಕ ವಿನ್ಯಾಸ ಹೊಂದಿರುವ ಪ್ಯೂರ್‌ಇಟ್ ಅಲ್ಟಿಮಾ ಆರ್‌ಒ ಮತ್ತು ಯುವಿ ಸಾಧನದಲ್ಲಿ ಶುದ್ಧತೆಯ ಮಾಪಕವನ್ನು ಮೊಟ್ಟಮೊದಲ ಬಾರಿಗೆ ಅಳವಡಿಸಲಾಗಿದೆ. ಸೆಕೆಂಡಿಗೆ ಗರಿಷ್ಠ 5000 ಪಟ್ಟು ಶುದ್ಧತೆಯನ್ನು ಇದು ಪರೀಕ್ಷಿಸುವುದರ ಮೂಲಕ ಕುಡಿಯುವ ನೀರು ಎಷ್ಟು ಪರಿಶುದ್ಧ ಎಂಬುದನ್ನು ತಿಳಿಸುತ್ತದೆ.

ವಿನೂತನ ವಿನ್ಯಾಸ ಮತ್ತು ಕ್ರಾಂತಿಕಾರಕ ಶುದ್ಧತೆಯನ್ನು ಗ್ರಾಹಕರಿಗೆ ಒದಗಿಸುತ್ತದೆ. ಸಾಧನದಲ್ಲಿ ಅಳವಡಿಸಲಾಗಿರುವ ಕೀಟನಾಶಕ ಕಿಟ್ ನ ಅವಧಿ ಯಾವಾಗ ಮುಗಿಯುತ್ತದೆ ಎಂಬುದರ ಸಂದೇಶವನ್ನೂ ಇದು ಗ್ರಾಹಕರಿಗೆ ತಲುಪಿಸುತ್ತದೆ. ಅದನ್ನು ಬದಲಿಸಲು ಯಾರನ್ನು ಸಂಪರ್ಕಿಸಬೇಕೆಂಬ ಮಾಹಿತಿ ಸಾಧನದಲ್ಲಿ ಮೂಡುತ್ತದೆ. ನೀರಿನ ರುಚಿ ಉಳಿಸಿಕೊಳ್ಳಲು ಅಗತ್ಯವಿರುವ ಖನಿಜಾಂಶಗಳನ್ನು ಇದು ಉಳಿಸಿಕೊಳ್ಳುತ್ತದೆ. ಆರು ಹಂತಗಳಲ್ಲಿ ಇಲ್ಲಿ ನೀರಿನ ಶುದ್ಧೀಕರಣ ನಡೆಯಲಿದ್ದು, ರಂಜಕ, ಸತು, ಪಾದರಸದಂಥ ಅಪಾಯಕಾರಿ ರಾಸಾಯನಿಕಗಳನ್ನು ನಿವಾರಿಸುತ್ತದೆ ಎನ್ನುತ್ತದೆ ಕಂಪೆನಿ.

ಬೆಲೆ 20,990 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ. ವಿವರಗಳಿಗೆ: 9820673330




## ಸ್ಕಿನ್ ಟೈಟಾನ್ ಸುಗಂಧ ದ್ರವ್ಯ

ಸ್ಕಿನ್ ಟೈಟಾನ್ ಸುಗಂಧ ಕಂಪೆನಿ ಇದೀಗ ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಎರಡು ಬಗೆಯ ಸುಗಂಧ ದ್ರವ್ಯವನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಬೆಲೆ 50 ಎಂಎಲ್‌ಗೆ 990 ರೂಪಾಯಿ ಮತ್ತು 100 ಎಂಎಲ್‌ಗೆ 1790 ರೂಪಾಯಿ.

ಮಾಹಿತಿಗೆ: 72592 55677




## ಆ್ಯಮ್‌ವೆ ಲಿಪ್‌ಗ್ಲೋಸ್

ಕಾಸ್ಮೆಟಿಕ್ಸ್ ಮತ್ತು ಸ್ಕಿನ್‌ಕೇರ್ ಉತ್ಪನ್ನಗಳಿಗೆ ಹೆಸರಾದ ಆ್ಯಮ್‌ವೆ ಇದೀಗ 'ಆ್ಯಟಿಟ್ಯೂಡ್' ಹೆಸರಿನಲ್ಲಿ ಹೊಸ ಬಗೆಯ ಲಿಪ್‌ಗ್ಲೋಸ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಪಿಂಕ್ ಬೆರ್ರಿ, ಮಿಡ್‌ನೈಟ್ ಮಿಸ್ಟ್, ಐಸಿ ಪಿಂಕ್ ಮತ್ತು ಲೂಸಿಯಸ್ ಪ್ಲಮ್.. ಹೀಗೆ ನಾಲ್ಕು ವೈವಿಧ್ಯಗಳಲ್ಲಿ ಸಿಗುತ್ತದೆ. ವಿಟಮಿನ್ ಇ ಯಿಂದ ಸಮೃದ್ಧವಾಗಿದ್ದು, ಸೌಂದರ್ಯ, ಆರೋಗ್ಯ ಎರಡಕ್ಕೂ ಪೂರಕವಾಗಿದೆ ಎನ್ನುವುದು ಕಂಪೆನಿ ಮಾತು.

ಬೆಲೆ 359 ರೂಪಾಯಿ. ಆ್ಯಮ್‌ವೆ ಮಾರಾಟ ಪ್ರತಿನಿಧಿಗಳಲ್ಲಿ ಲಭ್ಯ. ವಿವರಕ್ಕೆ: 9343832039



## ಆಮ್ರಪಾಲಿಯಿಂದ ಹರಳಿನಾಭರಣ

ಆಭರಣ ವಹಿವಾಟುಗಳಿಗೆ ಹೆಸರಾದ ಆಮ್ರಪಾಲಿ ಜ್ಯುವೆಲ್ಸ್ ಇದೀಗ ವಿಭಿನ್ನ ಬಗೆಯ ಮತ್ತು ವಿನ್ಯಾಸಗಳ ಹರಳಿನಾಭರಣಗಳನ್ನು ಬಿಡುಗಡೆ ಮಾಡಿದೆ. ವ್ಯಾಲೆಂಟೈನ್ಸ್ ದಿನದ ನೆಪದಲ್ಲಿ ಹೊರತಂದಿರುವ ಈ ಆಭರಣಗಳು ಅತ್ಯಾಧುನಿಕವಾಗಿದ್ದು ಎಲ್ಲ ಕಾಲಕ್ಕೂ ಸೂಕ್ತವಾಗಿದೆ. ಮದುವೆ, ಪಾರ್ಟಿಗಳಿಗೆ ಬಳಕೆಗೆ ಯೋಗ್ಯವಾಗಿದೆ. ಪ್ರೀತಿ ಪಾತ್ರರಿಗೆ ಉಡುಗೊರೆಯಾಗಿ ಕೊಡಲು ಸೂಕ್ತವಾಗಿದೆ. ನೈಸರ್ಗಿಕ ಬಣ್ಣಗಳಿಂದ ಕೂಡಿದೆ. ಆಮ್ರಪಾಲಿ ಆನ್‌ಲೈನ್ ಸ್ಟೋರ್‌ಗಳಲ್ಲಿ ಲಭ್ಯ.

ಮಾಹಿತಿಗೆ: www.tribebyamrapali.com

